### ಶುದ್ಧತತ್ತ್ವದ ಅಭಿವ್ಯಕ್ತಿಯಾಗಿ ಅವತಾರ

ಭಗವದ್ಗೀತೆಯಲ್ಲಿ ಅವತಾರರೂಪದಲ್ಲಿ ಭಗವಂತನು ಧರೆಗೆ ಇಳಿದುಬರುವ ಮುಖ್ಯ ಉದ್ದೇಶವನ್ನು ಹೀಗೆ ಹೇಳಲಾಗಿದೆ: **ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ** – "ಸಾಧುಗಳ ಸಂರಕ್ಷಣೆಗಾಗಿ ಮತ್ತು ದುಷ್ಟರ ವಿನಾಶಕ್ಕಾಗಿ." ಇಂದಿನ ಕಾಲದಲ್ಲಿ ಈ ಭಾವನೆ ಪ್ರಸ್ತುತವಲ್ಲ ಎಂದೆನಿಸಬಹುದು. ಹಾಗೆ ನೋಡಿದರೆ, ಭಗವದ್ಗೀತೆಗೆ ವ್ಯಾಖ್ಯಾನವನ್ನು ಬರೆದ ಮಧ್ಯಕಾಲೀನ ಭಾಷ್ಯಕಾರರು, ದುಷ್ಟರನ್ನು ನಾಶಮಾಡುವ ಕಾರ್ಯವು ಭಗವದವತಾರದ ಪ್ರಾಥಮಿಕ ಉದ್ದೇಶವೆಂದು ಪರಿಗಣಿಸಲಾಗದು ಎಂಬ ಅಭಿಪ್ರಾಯವನ್ನು ತಳೆದಿದ್ದಾರೆ. ಭಗವಂತನು ಜನ್ಮ ತಾಳದೆಯೇ ದುಷ್ಟರನ್ನು ಶಿಕ್ಷಿಸಬಲ್ಲ ಎಂದು ಶ್ರೀಮಧ್ವಾಚಾರ್ಯರು ಹೇಳುತ್ತಾರೆ. ಅವರ ಪ್ರಕಾರ, ಅವತಾರವೆನ್ನುವುದು ಭಗವಂತನ ದಿವ್ಯಲೀಲೆ ಅಥವಾ ಕ್ರೀಡೆಯ ಒಂದು ಅಂಗವಾಗಿದೆ. ಶ್ರೀಮಧ್ವರಿಗಿಂತ ಮೊದಲು, ಶ್ರೀರಾಮಾನುಜಾಚಾರ್ಯರು ಕೂಡ ದುಷ್ಟರ ವಿನಾಶಕ್ಕೆ ಎರಡನೆಯ ಆದ್ಯತೆಯನ್ನೇ ಕೊಡುತ್ತಾರೆ. ಏಕೆಂದರೆ ಕರುಣಾಳುವಾದ ಪರಮಾತ್ಮನು ತನ್ನ ಶತ್ರುಗಳ ಮೇಲೆಯೂ ಅನುಕಂಪವನ್ನು ಹರಿಸುತ್ತಾನೆ. ರಾಮಾನುಜರ ಪ್ರಕಾರ, ಭಗವದವತಾರದ ಪ್ರಾಥಮಿಕ ಉದ್ದೇಶವೇನೆಂದರೆ, **ಆರಾಧ್ಯ ಸ್ವರೂಪ ಪ್ರದರ್ಶನ** – ಆರಾಧಿಸುವುದಕ್ಕೆ ಅನುಕೂಲವಾಗಿರುವ ತನ್ನ ರೂಪವನ್ನು ಪ್ರಕಟಪಡಿಸುವುದು.


ಇಂದಿನ ಸಾಮಾಜಿಕ ಮತ್ತು ಧಾರ್ಮಿಕ ಸಂದರ್ಭದಲ್ಲಿ, ಪೂಜಿಸಲು ಯೋಗ್ಯವಾದ ದಿವ್ಯಪ್ರತೀಕದ ಮೂಲಕ ಪ್ರಕಟಗೊಳ್ಳುವುದೇ ಭಗವದವತಾರದ ಮುಖ್ಯ ಉದ್ದೇಶ ಎನ್ನುವ ಶ್ರೀರಾಮಾನುಜರ ಭಾವನೆ ಇಲ್ಲಿ ಹೆಚ್ಚು ಪ್ರಸ್ತುತ ಎಂದೆನಿಸುತ್ತದೆ. ಜಗತ್ತಿಗೆ ಇಂದು ಬೇಕಾಗಿರುವುದು ಮಾನವತೆ ಮತ್ತು ದಿವ್ಯತೆ – ಇವೆರಡೂ ಒಡಮೂಡಿದ, ಈಗಿನ ಕಾಲದ ಸಾಮಾಜಿಕ ರೀತಿನೀತಿಗಳು, ಧ್ಯೇಯಾದರ್ಶಗಳು ಮತ್ತು ಸಭ್ಯತೆಗಳ ಜೊತೆಗೆ ಸಾಮರಸ್ಯ ಹೊಂದಿರುವ, ಮನುಷ್ಯರೂಪವನ್ನು ಧರಿಸಿದ ಭಗವಂತನ ಪ್ರಾತಿನಿಧಿಕ ಸ್ವರೂಪ. ಭಾರತದಲ್ಲಂತೂ, ಯಾವ ದೇವತಾರೂಪವನ್ನು ಜನರು ತಮ್ಮ ಸ್ವಂತದ್ದೆಂದು ಆರಾಧಿಸಬಹುದೋ, ಹಾಗೆಯೇ ಉತ್ಕಟವಾದ ವೈಯಕ್ತಿಕ ಸಂಬಂಧವನ್ನು ಅದರೊಂದಿಗೆ ಇಟ್ಟುಕೊಳ್ಳಬಹುದೋ, ಅಂತಹ ಇಷ್ಟದೇವತಾ ರೂಪದ ಭಗವತ್ಸ್ವರೂಪವನ್ನು ಹೊಂದಿರುವ ಒಂದು ಹೊಸ ಆಧ್ಯಾತ್ಮಿಕ ಆದರ್ಶದ ಆವಶ್ಯಕತೆ ಬಹಳ ಕಾಲದಿಂದಲೂ ಇತ್ತು.

ರಾಜಾಧಿರಾಜರ ಮತ್ತು ರಾಜವೈಭವದ ದಿನಗಳು ಕಳೆದುಹೋದವು. ಇದು ಲೌಕಿಕ ಸ್ತರದಲ್ಲಿ ಮಾತ್ರವಲ್ಲ, ಆಧ್ಯಾತ್ಮಿಕ ಕ್ಷೇತ್ರದಲ್ಲಿಯೂ ಸತ್ಯವಾದ ಸಂಗತಿ. ಆಧುನಿಕ ಜಗತ್ತಿಗೆ ಬೇಕಾಗಿರುವುದು ಮಾನವತೆ ಮತ್ತು ದಿವ್ಯತೆಗಳೆರಡೂ ಮಿಳಿತಗೊಂಡ ಮಾದರಿಯ ಮೇಲೆ ಕೇಂದ್ರೀಕೃತವಾದ ನೂತನ ಆಧ್ಯಾತ್ಮಿಕ ಸ್ಥಿತ್ಯಂತರ. ಅದರಲ್ಲೂ ಭಾರತದಲ್ಲಿ ಜನಸಾಮಾನ್ಯರಿಗೆ ಸೇರಿದ, ಅವರ ಹಾಗೆಯೇ ಬದುಕಿ ಬಾಳುವ, ಅವರ ನೋವು ನಲಿವುಗಳನ್ನು ಅರ್ಥಮಾಡಿಕೊಳ್ಳುವ, ಅಂತಸ್ತು, ಜಾತಿ, ಪಂಗಡ, ಧರ್ಮ, ಪ್ರದೇಶ ಅಥವಾ ಜನಾಂಗಗಳು ಸೃಷ್ಟಿಸಿರುವ ಯಾವ ಅಂತರವನ್ನೂ ಪರಿಗಣಿಸದೆ ಅವ್ಯಾಜಪ್ರೇಮವನ್ನು ಎಲ್ಲರ ಮೇಲೂ ಹರಿಸುವ ಅವತಾರ ಪುರುಷನ ಬರವಿಗಾಗಿ ಜನರು ಬಹುಕಾಲದಿಂದಲೂ ಕಾಯುತ್ತಿದ್ದರು. ಶ್ರೀರಾಮಕೃಷ್ಣರು ಮೇಲಿನ ಎಲ್ಲ ಆವಶ್ಯಕತೆಗಳನ್ನೂ ಪೂರೈಸಿದರು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಭವಿಷ್ಯವಾಣಿಯನ್ನು ಉದಹರಿಸುವುದು ಹೆಚ್ಚು ಪ್ರಸ್ತುತ: "ಭವಿಷ್ಯ ಕಾಲದ ಮಹೋನ್ನತಿಯ ಸಂಕೇತವೋ ಎಂಬಂತೆ, ಕರುಣಾಳುವಾದ ಭಗವಂತನು ವರ್ತಮಾನ ಕಾಲದಲ್ಲಿ ಅವತರಿಸಿದ್ದಾನೆ. ಈ ಅವತಾರವು, ಮೇಲೆ ಹೇಳಿದಂತೆ, ಪರಿಪೂರ್ಣತೆಯೇ ಪ್ರಕಾಶಗೊಂಡಂತಿದೆ; ಎಲ್ಲ ಧ್ಯೇಯಾದರ್ಶಗಳನ್ನೂ ಸಂಯೋಜಿಸಿ ಸಾಮರಸ್ಯಗೊಳಿಸಿದೆ; ಆಧ್ಯಾತ್ಮಿಕ ಸಂಸ್ಕೃತಿಯ ಎಲ್ಲ ಆಯಾಮಗಳಿಗೂ ಏಳ್ಗೆಯನ್ನು ತಂದಿದೆ; ಹಿಂದಿನ ಯುಗಗಳ ಅವತಾರಗಳೆಲ್ಲವನ್ನೂ ಮೀರಿ ಮೆರೆದಿದೆ."

(ಮುಂದುವರಿಯುವುದು)

**ವಿವೇಕಾನಂದ ಕವನಮಂಜರಿ**

**ಶ್ರೀ ವಿವೇಕಾನಂದರ ಕೋಣೆಯನ್ನು ನೋಡಿ**



ಇಲ್ಲಿ ಕುಳಿತಿರ್ದನೇ ಗುರು ವಿವೇಕಾನಂದ?
ಇಲ್ಲಿ ನುಡಿದನೆ? ಇಲ್ಲಿ ನಡೆದನೆ? ನೋಡಿದನೆ?
ಇಲ್ಲಿ ತನ್ನಾ ಮಿಂಚು ಗುಡುಗಾಟವಾಡಿದನೆ!
ಇಲ್ಲಿ ಭಾರತದ ಕೀರ್ತಿ ಜ್ಯೋತಿ ತಾ ನಂದಿ
ಮೆರೆದನೇ ಬ್ರಹ್ಮದಲಿ ಬೆಳಗಿ? ತಾಯೇ ನೊಂದೆ.
ಆದರೇನೌ? ಮರಳಿ ಬಾರದಿಹನೇ ಮಗನು?
ಮರಳಿ ನೀನಣಿ ಮಾಡಿಕೊಡುವ ಒಡಲನು ಹೊಗನೆ?
ನಿನ್ನಳಲ ಮರೆಯಬಲ್ಲನೆ ದಿವದೊಳೇ ನಿಂದು?
ಕಾದಿಹುದು ಅದೆ ಪೀಠ, ಅದೆ ವಸ್ತ್ರ, ಅದೆ ತಲ್ಪ;
ಕಾದಿಹುದು ಅದೆ ನಾಡು, ಅದೆ ಜನತೆ, ಅದೆ ನೋವು.
ಇದು ತನ್ನದೆಂದ ಮುನ್ನವೆ ನಮ್ಮ ನೆಲಕಿಳಿದ
ಆ ಕರುಣೆ, ಒಮ್ಮೆ ತನತೆಂದ ಭೂಮಿಗೆ ಸುಳಿದು
ಬಾರದಿರುವುದೆ ಮತ್ತೆ? ಆಗುತಿದೆ ಸಂಕಲ್ಪ;
ಇನ್ನೊಮ್ಮೆ ನಮ್ಮ ಸಾರುವುದು ಆ ಹಿರಿಜೀವ.

– ಶ್ರೀನಿವಾಸ (ಮಾಸ್ತಿ ವೆಂಕಟೇಶ ಅಯ್ಯಂಗಾರ್)



# ಭಗವದ್ಗೀತಾ ತತ್ತ್ವಸೌರಭ

ಸ್ವಾಮಿ ನಿತ್ಯಸ್ಥಾನಂದ

(ಹಿಂದಿನ ಸಂಚಿಕೆಯಿಂದ)

## ಸ್ವಧರ್ಮ

**ಪ್ರಾ**ರಂಭದಲ್ಲಿ ಕರ್ಮ ಮತ್ತು ಧ್ಯಾನ ಸಮಾನಾಂತರವಾಗಿ ಮುಂದುವರಿಯಬೇಕು. ಅವು ಪರಸ್ಪರ ಪೂರಕವಾಗುತ್ತವೆ. ಕರ್ಮವು ದಿಕ್ಕು ತಪ್ಪದಂತೆ ಧ್ಯಾನ ನೋಡಿಕೊಳ್ಳುತ್ತದೆ ಮತ್ತು ಕರ್ಮವು ಮನಸ್ಸನ್ನು ಧ್ಯಾನಕ್ಕೆ ಸಿದ್ಧಗೊಳಿಸುತ್ತದೆ. ಸಾಧನೆಯ ಸಮಯದಲ್ಲಿ ನಾವು ಎಷ್ಟೋ ಭಾವಗಳನ್ನು ಅದುಮಿಡುತ್ತೇವೆ. ಆರೋಗ್ಯಕರವಾದ ಕೆಲಸ ಇಂಥ ಭಾವಗಳನ್ನು ಹೊರಹಾಕಲು ಸಹಾಯಕವಾಗುತ್ತದೆ. ಪ್ರಾರಂಭದಲ್ಲಿ ಸಾಧನೆ ಅನೇಕ ಬಗೆಯ ಬಿಗಿತಗಳಿಗೆ (tension) ಕಾರಣವಾಗುತ್ತದೆ. ಕೆಲಸ ಈ ಬಿಗಿತಗಳನ್ನು ಹೋಗಲಾಡಿಸುತ್ತದೆ. ಮುಂದುವರಿದ ಸಾಧಕನ ವಿಷಯದಲ್ಲಿ ಕೆಲಸವೇ ಒಂದು ಬಿಗಿತವಾಗಿದ್ದು, ಧ್ಯಾನ ಅದನ್ನು ನಿವಾರಿಸುತ್ತದೆ. ಕರ್ಮಯೋಗದ ಮೂಲಕ ಸಾಕಷ್ಟು ಮಾನಸಿಕ ಪರಿಪಕ್ವತೆಯನ್ನು ಪಡೆಯದೆ ಕೇವಲ ಧ್ಯಾನಜಪಾದಿಗಳಿಂದ ವ್ಯಕ್ತಿತ್ವದಲ್ಲಿ ಯಾವುದೇ ಪರಿವರ್ತನೆ ಉಂಟಾಗುವುದಿಲ್ಲ.

ಬೌದ್ಧಧರ್ಮಕ್ಕೆ ಸಂಬಂಧಿಸಿದ ಒಂದು ಕಥೆ ಇದನ್ನು ಚೆನ್ನಾಗಿ ಸಮರ್ಥಿಸುತ್ತದೆ. ಒಂದು ಸಂನ್ಯಾಸಿಮಠ ಇತ್ತು. ಅಲ್ಲಿ ಅನೇಕ ಸಂನ್ಯಾಸಿಗಳು ಮತ್ತು ಸಂನ್ಯಾಸಿನಿಯರು ಸಾಧನೆಯಲ್ಲಿ ನಿರತರಾಗಿದ್ದರು. ಒಬ್ಬಳು ಸಂನ್ಯಾಸಿನಿ ತುಂಬ ಕಟ್ಟುನಿಟ್ಟಾಗಿ ತನ್ನ ಕೊಠಡಿಯೊಳಗೆ ಜಪ ಮಾಡುತ್ತಿದ್ದಳು. ಜಪಮಾಲೆಯ ಸಹಾಯದಿಂದ ಜಪದ ಸಂಖ್ಯೆ ಇಡುತ್ತಿದ್ದಳು. ಸಂಖ್ಯೆ ಆಕೆಗೆ ಬಹಳ ಮುಖ್ಯ – ಎಷ್ಟೋ ಜಪವನ್ನು ಕೊಟ್ಟು ದೇವರನ್ನು ಕೊಂಡುಕೊಳ್ಳುವ ವಿಧಾನ! ಪ್ರತಿದಿನದ ಜಪಸಂಖ್ಯೆಯನ್ನು ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುತ್ತಿದ್ದಳು. ಓಡಾಡುವಾಗಲೆಲ್ಲ ಕೈಯಲ್ಲಿ ಜಪಮಾಲೆ ಸುತ್ತುತ್ತಾ ಇರುತ್ತಿತ್ತು. ಊಟದ ಸಮಯದಲ್ಲಿ ಅದು ಎಡಕೈಯನ್ನು ಅಲಂಕರಿಸುತ್ತಿತ್ತು! ಎರಡೂ ಕೈಗಳು ಕೆಲಸದಲ್ಲಿ ತೊಡಗಿದ್ದಾಗ ಜಪಮಾಲೆ ಕೊರಳನ್ನು ಸೇರುತ್ತಿತ್ತು. ಹೀಗೆ ಆಶ್ರಮದ ಯಾವುದೇ ಚಟುವಟಿಕೆಯಲ್ಲಿ ಭಾಗವಹಿಸದೆ ತನ್ನ ಪಾಡಿಗೆ ತಾನು ಸಾಧನೆ ಮಾಡಿಕೊಂಡಿದ್ದಳು. ಆದರೆ ಹತ್ತು ವರ್ಷಗಳ ಕಾಲ ಈ ರೀತಿ ಸಾಧನೆ ಮಾಡಿದರೂ ಆಕೆಯಲ್ಲಿ ಯಾವುದೇ ಪರಿವರ್ತನೆ ಉಂಟಾಗಿರಲಿಲ್ಲ. ಎಲ್ಲರೊಡನೆಯೂ ಜಗಳ, ಮನಸ್ತಾಪ. ಅವಳ ವೈಯಕ್ತಿಕ ಸೌಲಭ್ಯಗಳಿಗೆ ಸ್ವಲ್ಪ ಅಡೆತಡೆ ಉಂಟಾದರೂ ಸಿಡಿಮಿಡಿಗುಟ್ಟುತ್ತಿದ್ದಳು. ಇಡೀ ಆಶ್ರಮದಲ್ಲಿ ಯಾರೂ ಆಕೆಯನ್ನು ಇಷ್ಟಪಡುತ್ತಿರಲಿಲ್ಲ.

ಒಬ್ಬ ಸಂನ್ಯಾಸಿ ಆಕೆಗೆ ಬುದ್ಧಿ ಕಲಿಸಬೇಕೆಂದು ಒಂದು ಉಪಾಯ ಮಾಡಿದ. ಆಕೆ ತನ್ನ ಕೊಠಡಿಯಲ್ಲಿ ಬಾಗಿಲು ಹಾಕಿಕೊಂಡು ಜಪ ಮಾಡುತ್ತಿದ್ದಾಗ, ಇವನು ಹೊರಗಿನಿಂದ ಬಾಗಿಲು ತಟ್ಟುವುದಕ್ಕೆ ಪ್ರಾರಂಭಿಸಿದನು. ಅವಳ ಮನಸ್ಸಿನಲ್ಲಿ ಕೋಪ ಹೆಡೆಯೆತ್ತ ತೊಡಗಿತು. ಅದನ್ನು ಶಮನಗೊಳಿಸಲು ಜೋರಾಗಿ ಜಪಮಾಲೆಯನ್ನು ತಿರುಗಿಸುತ್ತ ಜಪ ಮಾಡತೊಡಗಿದಳು. ಆ ಸಂನ್ಯಾಸಿಯು ಅವಳ ಹೆಸರು ಹಿಡಿದು ಕರೆಯತೊಡಗಿದನು. ಅವಳ ಕೋಪಾಗ್ನಿಯು ಇನ್ನೂ ಜ್ವಲಂತವಾಗಿ ಉರಿಯತೊಡಗಿತು. ಅದನ್ನು ತಡೆಯಬೇಕೆಂಬ ಆಕೆಯ ಎಲ್ಲ ಪ್ರಯತ್ನವೂ ವಿಫಲವಾಯಿತು. ಅವನೂ ಅವಳ ಹೆಸರನ್ನು ಕರೆಯುವುದನ್ನು ನಿಲ್ಲಿಸಲೇ ಇಲ್ಲ!

ಆಕೆಗೆ ಇನ್ನು ತಡೆಯಲಾಗಲಿಲ್ಲ. ಛಂಗನೆ ಮೇಲೆದ್ದಳು. ಜಪಮಾಲೆಯನ್ನು ಎಸೆದಳು, ದಢಾರನೆ ಬಾಗಿಲು ತೆರೆದಳು. ಸಂನ್ಯಾಸಿ ಮುಗುಳ್ನಗುತ್ತ ನಿಂತಿದ್ದಾನೆ. ಅವನನ್ನು ನೋಡಿ ಇವಳ ಕೋಪ ನೆತ್ತಿಗೇರಿತು. ತನಗೆ ಗೊತ್ತಿದ್ದ ಅವಾಚ್ಯ ಶಬ್ದಗಳನ್ನೆಲ್ಲ ಉಪಯೋಗಿಸಿ ಅವನ ಮೇಲೆ ಬೈಗುಳಗಳ ಮಳೆಗೆರೆದಳು. ಆಕೆಯ ವಾಗ್ಬಾಣಗಳೆಲ್ಲ ಮುಗಿದ ಮೇಲೆ ಅವನು ಶಾಂತವಾಗಿಯೇ ಹೇಳತೊಡಗಿದ, "ನೋಡಮ್ಮ, ನಾನು ನಿನ್ನನ್ನು ಕರೆದದ್ದು ಕೇವಲ ಹತ್ತು ನಿಮಿಷಗಳ ಕಾಲ ಅಷ್ಟೇ. ನೀನು ಇಷ್ಟಕ್ಕೇ ಎಷ್ಟೊಂದು ಕೋಪ ಮಾಡಿಕೊಂಡಿದ್ದೀಯೆ! ನೀನು ಹತ್ತು ವರ್ಷದಿಂದ ದೇವರನ್ನು ಕರೆಯುತ್ತಿದ್ದೀಯೆ, ಅವನಿಗೆ ಇನ್ನೆಷ್ಟು ಕೋಪ ಬಂದಿರಬಹುದು, ಯೋಚಿಸಿನೋಡು!" ಆಗ ಆಕೆಯ ಕಣ್ಣು ತೆರೆಯಿತು, ಆಕೆ ತನ್ನ ನಡತೆಯನ್ನು ತಿದ್ದಿಕೊಂಡಳು.

ನಮ್ಮಲ್ಲಿ ಭಗವದ್ಧರ್ಮ ಅಧಿಕವಾದಷ್ಟೂ ಸ್ವಧರ್ಮ ಕಡಮೆಯಾಗುತ್ತ ಬರುತ್ತದೆ. ಆಗ ಭಗವದ್ಧರ್ಮವೇ, ಭಗವಚ್ಚಿಂತನೆಯೇ ನಮ್ಮ ಸ್ವಧರ್ಮವಾಗುತ್ತದೆ. ಗಾಣದಲ್ಲಿ ಮಧ್ಯದ ಕಂಬದ ಹತ್ತಿರವಿದ್ದಷ್ಟೂ ಚಲನೆ ಕಡಮೆ, ದೂರವಾದಷ್ಟೂ ಚಲನೆ ಜಾಸ್ತಿ. ಹಾಗೆಯೇ ನಾವು ಭಗವಂತನ ಸಮೀಪವಾದಷ್ಟೂ ಕರ್ಮ ಕಡಮೆಯಾಗುತ್ತದೆ. ಏಕೆಂದರೆ ನಮ್ಮ ಯೋಗಕ್ಷೇಮವನ್ನು ಅವನೇ ನೋಡಿಕೊಳ್ಳುತ್ತಾನೆ. ಆಟದಲ್ಲಿ ಅಂಪೈರ್‌ಗೆ ಕೆಲಸವಿಲ್ಲ. ಅವನು ಇಡೀ ಆಟವನ್ನು ಪೂರ್ಣವಾಗಿ ನೋಡುತ್ತಾನೆ. ಈ ರೀತಿ ಪೂರ್ಣ ದೃಷ್ಟಿಯುಳ್ಳವರಿಗೆ ಕೆಲಸವಿಲ್ಲ.

**ತ್ರೈಗುಣ್ಯವಿಷಯಾ ವೇದಾಃ ನಿಸ್ತ್ರೈಗುಣ್ಯೋ ಭವಾರ್ಜುನ** – “ಹೇ ಅರ್ಜುನ, ವೇದಗಳು ತ್ರಿಗುಣಾತ್ಮಕವಾದವುಗಳು. ನೀನು ತ್ರಿಗುಣರಹಿತನಾಗು” ಎಂದು ಶ್ರೀಕೃಷ್ಣನು ಹೇಳುತ್ತಾನೆ. ಅಂದರೆ, “ವೇದಗಳನ್ನೂ ಮೀರಿಹೋಗು” ಎಂದರ್ಥ. ವೇದಗಳಲ್ಲಿ ಮತ್ತು ಇತರ ಶಾಸ್ತ್ರಗಳಲ್ಲಿ ಬರುವ ಹಲವಾರು ವಿಷಯಗಳು ಸತ್ವ, ರಜಸ್ಸು ಮತ್ತು ತಮಸ್ಸುಗಳೆಂಬ ತ್ರಿಗುಣಗಳಿಗೆ ಸಂಬಂಧಪಟ್ಟವು. ಆದರೆ, ಪರಬ್ರಹ್ಮನ ಅನುಭವವು ಗುಣಾತೀತವಾದುದು. ಅದನ್ನು ಪಡೆಯಬೇಕಾದರೆ ಈ ತ್ರಿಗುಣಗಳನ್ನು ಮೀರಿಹೋಗಬೇಕು. ಶ್ರೀರಾಮಕೃಷ್ಣರು ಇದನ್ನು ಒಂದು ಸುಂದರ ಕಥೆಯ ಮೂಲಕ ವಿವರಿಸುತ್ತಿದ್ದರು:

ಒಮ್ಮೆ ಒಬ್ಬ ಶ್ರೀಮಂತ ವ್ಯಾಪಾರಿಯು ಕಾಡಿನ ದಾರಿಯಲ್ಲಿ ಒಬ್ಬನೇ ನಡೆದುಕೊಂಡು ಹೋಗುತ್ತಿದ್ದನು. ಕಳ್ಳಕಾಕರ ಭಯದಿಂದ ಬೇಗಬೇಗನೆ ಹೆಜ್ಜೆ ಹಾಕುತ್ತಿದ್ದನು. ಅವನ ಜೇಬಿನ ತುಂಬ ಹಣವಿತ್ತು. ಎಷ್ಟೇ ನಡೆದರೂ ಕಾಡು ಮುಗಿಯುತ್ತಿಲ್ಲ. ಆಗ ಮೂವರು ವ್ಯಕ್ತಿಗಳು ದಾರಿಗೆ ಅಡ್ಡಲಾಗಿ ಬಂದರು. ಒಬ್ಬನ ಕೈಯಲ್ಲಿ ಕತ್ತಿ ಇತ್ತು, ಮತ್ತೊಬ್ಬನ ಕೈಯಲ್ಲಿ ಒಂದು ದೊಣ್ಣೆ ಮತ್ತು ಹಗ್ಗಗಳಿದ್ದವು. ಇನ್ನೊಬ್ಬನದು ಬರಿಗೈ. ವ್ಯಾಪಾರಿಗೆ ದಿಗಿಲಾಯಿತು, ದೇಹ ಕಂಪಿಸತೊಡಗಿತು. ಮೂವರು ಬಂದವರು ಇವನನ್ನು ಹಿಡಿದುಕೊಂಡು ಜಪ್ತಿಮಾಡತೊಡಗಿದರು. ಅವರಿಂದ ತಪ್ಪಿಸಿಕೊಳ್ಳುವ ಇವನ ಹೋರಾಟ, ಭಯದಿಂದಾಗಿ ಯಶಸ್ವಿಯಾಗಲಿಲ್ಲ. ಅವರು ಅವನಲ್ಲಿದ್ದ ಹಣವನ್ನೂ ಮೈಮೇಲಿದ್ದ ಚಿನ್ನದ ಒಡವೆಗಳನ್ನೂ ತೆಗೆದುಕೊಂಡರು. “ಇಷ್ಟೆಲ್ಲ ಆದಮೇಲೆ ಇವನನ್ನು ಉಳಿಸುವುದು ಏತಕ್ಕೆ, ಮುಗಿಸಿಯೇಬಿಡೋಣ” ಎಂದು ಕೈಯಲ್ಲಿ ಕತ್ತಿ ಹಿಡಿದವನು ಹೇಳಿದನು. “ಇವನನ್ನು ಕೊಲ್ಲುವುದರಿಂದ ಏನು ಪ್ರಯೋಜನ, ಇಲ್ಲಿಯೇ ಒಂದು ಮರಕ್ಕೆ ಕಟ್ಟಿಹಾಕಿಬಿಡೋಣ” ಎಂದನು ಎರಡನೆಯವನು. ಅಂತೆಯೇ ಆ ವ್ಯಾಪಾರಿಯನ್ನು ಮರಕ್ಕೆ ಕಟ್ಟಿಹಾಕಿ ಮೂವರೂ ಅಲ್ಲಿಂದ ಹೊರಟುಹೋದರು. ಆದರೆ ಮೂರನೆಯ ಕಳ್ಳ ಸ್ವಲ್ಪ ಹೊತ್ತಿನಲ್ಲಿಯೇ ಹಿಂದಿರುಗಿ ಬಂದು, ವ್ಯಾಪಾರಿಯನ್ನು ಬಂಧನದಿಂದ ಬಿಡಿಸಿ, ಅವನ ಊರಿಗೆ ದಾರಿತೋರಿಸಿದನು. ವ್ಯಾಪಾರಿಗೆ ಅತ್ಯಾಶ್ಚರ್ಯ. ತನ್ನ ಹಣವನ್ನೆಲ್ಲ ಕಳೆದುಕೊಂಡಿದ್ದರೂ ಆ ಕಳ್ಳನ ಬಗ್ಗೆ ವ್ಯಾಪಾರಿಗೆ ತುಂಬ ಕೃತಜ್ಞತೆಯುಂಟಾಯಿತು; ತನ್ನೊಡನೆ ಊರಿಗೆ ಬಾ ಎಂದು ಆಹ್ವಾನಿಸಿದನು. ಆದರೆ ಕಳ್ಳ, “ನಾನು ಬಂದರೆ ಪೊಲೀಸಿನವರಿಗೆ ಸಿಕ್ಕಿಹಾಕಿಕೊಳ್ಳಬೇಕಾಗುತ್ತದೆ” ಎಂದು ಹೇಳಿ ಹಾಗೆಯೇ ಕಾಡಿನಲ್ಲಿ ನುಸುಳಿಕೊಂಡನು.

“ಕೊಂದುಹಾಕಿಬಿಡೋಣ” ಎಂದ ಕಳ್ಳನು ತಮೋಗುಣವನ್ನು, “ಮರಕ್ಕೆ ಕಟ್ಟಿಹಾಕೋಣ” ಎಂದವನು ರಜೋಗುಣವನ್ನು ಮತ್ತು ವ್ಯಾಪಾರಿಯನ್ನು ಬಿಡಿಸಿ ಊರಿಗೆ ದಾರಿ ತೋರಿಸಿದ ಕಳ್ಳನು ಸತ್ವಗುಣವನ್ನೂ ಪ್ರತಿನಿಧಿಸುತ್ತಾರೆ. ತಮೋಗುಣವು ವ್ಯಕ್ತಿಯನ್ನು ನಾಶಮಾಡುತ್ತವೆ, ರಜೋಗುಣವು ಆತನನ್ನು ಪ್ರಪಂಚಕ್ಕೆ ಬಂಧಿಸುತ್ತದೆ, ಸತ್ವಗುಣವು ಅವನನ್ನು ಬಂಧನದಿಂದ ಬಿಡಿಸಿ ದೇವರೆಡೆಗೆ ದಾರಿ ತೋರಿಸುತ್ತದೆ. ಆದರೆ ಸತ್ವಗುಣವೂ ಪ್ರಕೃತಿಗೆ, ಮಾಯಾರಾಜ್ಯಕ್ಕೆ ಸೇರಿದುದಾದ್ದರಿಂದ, ದೇವರಿಂದ ದೂರವೇ ಉಳಿಯುತ್ತದೆ. ಆದರೆ ದೇವರನ್ನು ಪಡೆಯಲು ಸಹಾಯಕವಾಗುತ್ತದೆ. ಆದ್ದರಿಂದಲೇ “ನೀನು ನಿಸ್ತ್ರೈಗುಣ್ಯನಾಗು” ಎಂದು ಶ್ರೀಕೃಷ್ಣ ಅರ್ಜುನನಿಗೆ ಹೇಳಿದುದು.

ಈ ರೀತಿ ಗುಣಾತೀತನಾದವನಿಗೆ ವೇದಾದಿಶಾಸ್ತ್ರಗಳಿಂದ ಯಾವುದೇ ಪ್ರಯೋಜನವಿಲ್ಲ ಎಂಬುದನ್ನು ಶ್ರೀಕೃಷ್ಣನು ಉದಾಹರಣೆಯ ಮೂಲಕ ವಿವರಿಸುತ್ತಾನೆ.

**ಯಾವಾನರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ । ತಾವಾನ್ ಸರ್ವೇಷು ವೇದೇಷು ಬ್ರಾಹ್ಮಣಸ್ಯ ವಿಜಾನತಃ ॥ (೨.೪೬)**

**“ಎಲ್ಲ ಕಡೆಯೂ ನೀರು ತುಂಬಿಕೊಂಡಿರುವಾಗ ಬಾವಿ ಮುಂತಾದವುಗಳಿಂದ ಏನೂ ಪ್ರಯೋಜನವಿಲ್ಲದಿರುವಂತೆ ಜ್ಞಾನಿಯಾದ ಬ್ರಾಹ್ಮಣನಿಗೆ ವೇದಗಳಿಂದ ಯಾವ ಪ್ರಯೋಜನವೂ ಇಲ್ಲ.”**

ಬಾವಿ ಮುಂತಾದವುಗಳ ಪ್ರಯೋಜನವು ಮಹಾಜಲಾಶಯದಲ್ಲಿ ಅಂತರ್ಗತವಾಗುತ್ತದೆ. ಹಾಗೆಯೇ ಶಾಸ್ತ್ರಗಳ ಪ್ರಯೋಜನವೂ ಬ್ರಹ್ಮಾನುಭವದಲ್ಲಿ ಅಂತರ್ಗತವಾಗುತ್ತದೆ. ನಾವು ಬಾವಿಗೆ ಹೋಗುವುದು ನೀರಿಗಾಗಿ, ನಾವು ನೀರಿನಲ್ಲೇ ಮುಳುಗಿರುವಾಗ ಬಾವಿ ಏತಕ್ಕೆ ಬೇಕು? ಹಾಗೆಯೇ ನಾವು ಶಾಸ್ತ್ರವನ್ನು ಓದುವುದು ಬ್ರಹ್ಮವನ್ನು, ಬ್ರಹ್ಮಾನಂದವನ್ನು ಪಡೆಯುವುದಕ್ಕೆ. ನಾವು ಅದನ್ನು ಪಡೆದಾದ ಮೇಲೆ, ಬ್ರಹ್ಮಾನಂದದಲ್ಲಿಯೇ ಮುಳುಗಿರುವಾಗ ಶಾಸ್ತ್ರಗಳಿಂದ ಏನು ಪ್ರಯೋಜನ? ಪಾಂಡಿತ್ಯದೃಷ್ಟಿಯಿಂದ ಶಾಸ್ತ್ರಾಧ್ಯಯನ ಮಾಡುವವರಿಗೆ ಮಾತ್ರ ಅದರ ಆವಶ್ಯಕತೆ ಯಾವಾಗಲೂ ಇರುತ್ತದೆ. ಒಂದು ಸರೋವರದ ಪಕ್ಕದಲ್ಲಿ ಕುಳಿತಿರುವ ಯಾರೂ ನೀರಿಗಾಗಿ ಬಾವಿ ತೋಡುವುದಿಲ್ಲ.

ಛಾಂದೋಗ್ಯ ಉಪನಿಷತ್ ದಾಳದ ಉದಾಹರಣೆಯ ಮೂಲಕ ಈ ವಿಷಯವನ್ನು ವಿವರಿಸುತ್ತದೆ. ಹೆಚ್ಚಿನ ಸಂಖ್ಯೆಯ ದಾಳದ ಭಾಗದಲ್ಲಿ ಕಡಮೆ ಸಂಖ್ಯೆಗಳು ಅಡಕವಾಗಿರುವಂತೆ ಆತ್ಯಂತಿಕ ಜ್ಞಾನವನ್ನು ಪಡೆದವನಿಗೆ ಎಲ್ಲ ಕಾಮನೆಗಳೂ ಪೂರ್ಣವಾದಂತೆ ಇರುತ್ತದೆ (**ಯಥಾಕೃತಾಯವಿಜಿತಾಯಾಧರೇಯಾಃ ಸಂಯಂತ್ಯೇವಮೇನಂ ಸರ್ವಂ ತದಭಿಸಮೇತಿ ಯತ್ ಕಿಂಚ ಪ್ರಜಾಃ ಸಾಧು**

**ಕುರ್ವಂತಿ ಯಸ್ತದ್ವೇದ ಯತ್ ಸ ವೇದ ಸ ಮಯೈತದುಕ್ತ ಇತಿ**– ಛಾಂ. ಉ. ೪.೧.೪.) ನಾವು ಕುಡಿಯುವುದಕ್ಕೆ, ಸ್ನಾನಕ್ಕೆ ಮುಂತಾದವುಗಳಿಗೆ ನೀರಿನ ಬೇರೆ ಬೇರೆ ಮೂಲಗಳಿಗೆ ಹೋಗುತ್ತೇವೆ. ಎಲ್ಲೆಲ್ಲಿಯೂ ನೀರಿರುವಾಗ ಅವೆಲ್ಲವೂ ಒಂದೇ ಕಡೆ ಆಗಲು ಸಾಧ್ಯ. ಹಾಗೆಯೇ ಜ್ಞಾನಿಗೆ, ಬ್ರಹ್ಮಜ್ಞಾನದಲ್ಲೇ ಎಲ್ಲ ಕಾಮನೆಗಳೂ ಪೂರ್ತಿಗೊಳ್ಳುತ್ತವೆ. **ಬ್ರಹ್ಮಾನಂದೇ ಕ್ಷುದ್ರ ಆನಂದಾನಾಂ ಅಂತರ್ಭೂತತ್ವಾತ್** – ಬ್ರಹ್ಮಾನಂದದಲ್ಲಿಯೇ ಇತರ ಎಲ್ಲ ಸಾಮಾನ್ಯ ಆನಂದಗಳೂ ಅಡಕವಾಗುತ್ತದೆ" (ಭಗವದ್ಗೀತಾ, ಶ್ರೀಧರ ಭಾಷ್ಯ). ಆತ್ಮವನ್ನು ಬಯಸುವವನು ಆತ್ಮಕಾಮನಾಗುತ್ತಾನೆ, ಆತ್ಮನನ್ನು ಪಡೆದ ಮೇಲೆ ಆಪ್ತಕಾಮನಾಗುತ್ತಾನೆ ಮತ್ತು ಎಲ್ಲ ಆಸೆಗಳಿಂದ ಮುಕ್ತವಾಗಿ ಅಕಾಮನಾಗುತ್ತಾನೆ. ಆದ್ದರಿಂದಲೇ ಭಾಗವತ ಹೀಗೆ ಹೇಳುತ್ತದೆ: **ನಿರ್ಗುಣೇ ಬ್ರಹ್ಮಣಿ ಮಯಿ ಧಾರಯನ್ ವಿಶದಂ ಮನಃ । ಪರಮಾನಂದಮಾಪ್ನೋತಿ ಯತ್ರ ಕಾಮೋಽವಸೀಯತೇ** (೧೧:೧೫:೧೭) "ಯೋಗಿಯು ತನ್ನ ಸ್ವಚ್ಛ ಮನಸ್ಸನ್ನು ನಿರ್ಗುಣ ಬ್ರಹ್ಮನಾದ ನನ್ನಲ್ಲಿ (ಭಗವಂತನಲ್ಲಿ) ನೆಲೆಗೊಳಿಸುವುದರ ಮೂಲಕ ಪರಮಾನಂದವನ್ನು ಪಡೆಯುತ್ತಾನೆ; ಆಗ ಎಲ್ಲ ಆಸೆಗಳೂ ಕೊನೆಗೊಳ್ಳುತ್ತವೆ (ಪೂರ್ತಿಯಾದಂತಾಗುತ್ತದೆ)."

'**ಯಾವಾನರ್ಥ ಉದಪಾನೇ**' ಎಂದು ಆರಂಭವಾಗುವ, ಹಿಂದೆ ಹೇಳಿದ ಭಗವದ್ಗೀತಾ ಶ್ಲೋಕಕ್ಕೆ ರಾಮಾನುಜಾಚಾರ್ಯರು ಈ ರೀತಿ ವಿವರಣೆ ನೀಡುತ್ತಾರೆ: "ಎಲ್ಲೆಲ್ಲಿಯೂ ತುಂಬಿಕೊಂಡಿರುವ, ಅನೇಕ ಪ್ರಯೋಜನವುಳ್ಳ ಜಲಾಶಯದಿಂದ ಮನುಷ್ಯನು ದಾಹವನ್ನು ನೀಗಿಸಲು ಎಷ್ಟು ನೀರು ಬೇಕೋ, ಅಷ್ಟನ್ನು ಮಾತ್ರ ಸ್ವೀಕರಿಸುತ್ತಾನೆ. ಹಾಗೆಯೇ ವೇದಗಳಲ್ಲಿ ಎಲ್ಲ ರೀತಿಯ ಅರ್ಥಸಿದ್ಧಿಗಳಿದ್ದರೂ ಮುಮುಕ್ಷುವು ಮೋಕ್ಷಸಾಧನೆಗೆ ಎಷ್ಟುಬೇಕೊ ಅಷ್ಟು ವಿಷಯವನ್ನು ಮಾತ್ರ ಸ್ವೀಕರಿಸುತ್ತಾನೆ, ಉಳಿದವುಗಳನ್ನಲ್ಲ."

ವಿದ್ಯಾರಣ್ಯ ಮುನಿಗಳು ತಮ್ಮ 'ಪಂಚದಶಿ' ಎಂಬ ಗ್ರಂಥದಲ್ಲಿ ಹೀಗೆ ಹೇಳುತ್ತಾರೆ:

**ಗ್ರಂಥಾನಭ್ಯಸ್ಯ ಮೇಧಾವೀ ಜ್ಞಾನವಿಜ್ಞಾನತತ್ಪರಃ । ಪಲಾಲಮಿವ ಧಾನ್ಯಾರ್ಥೀ ತ್ಯಜೇತ್ ಗ್ರಂಥಮಶೇಷತಃ ॥**

"ಅನ್ನವನ್ನು ತಿನ್ನಬಯಸುವವನು ಭತ್ತವನ್ನು ಕುಟ್ಟಿ, ಅದರ ಹೊಟ್ಟನ್ನು ತೆಗೆದು ಅಕ್ಕಿಯನ್ನು ಬೇಯಿಸಿ ತಿನ್ನುತ್ತಾನೆ. ಹಾಗೆಯೇ ಮೇಧಾವಿಯಾದವನು, ಜ್ಞಾನ–ವಿಜ್ಞಾನವನ್ನು ಬಯಸುವವನು, ಮೊದಲು ಗ್ರಂಥಗಳನ್ನು ಅಭ್ಯಾಸ ಮಾಡಿ, ಅನಂತರ ಅವುಗಳನ್ನು ಸಂಪೂರ್ಣವಾಗಿ ತ್ಯಜಿಸಬೇಕು."

ಖುರಾನ್ ಬಗ್ಗೆ ಪ್ರಸಿದ್ಧ ಸೂಫಿ ಸಂತ ಜಲಾಲುದ್ದೀನ್ ರೂಮಿ ಇದೇ ಮಾತನ್ನು ಹೇಳುತ್ತಾನೆ: "ಖುರಾನಿನ ಮೂಳೆಸಾರವನ್ನು ನಾನು ಹೀರಿಕೊಂಡೆ, ಉಳಿದ ಮೂಳೆಗಳನ್ನು ನಾಯಿಗೆ ಹಾಕಿದೆ" (ಮಸ್ನಾವಿ).

ಪರ್ವತದಿಂದ ಹರಿದುಬರುವ ಬೇರೆ ಬೇರೆ ಝರಿಗಳು ಒಂದೆಡೆ ಸೇರಿ ಜಲಾಶಯವಾಗುತ್ತದೆ. ಆ ಸರೋವರದಲ್ಲಿ ಬೇರೆ ಬೇರೆ ಝರಿಗಳ ಎಲ್ಲ ಪ್ರಯೋಜನವನ್ನು ಪಡೆಯಬಹುದು. ಹಾಗೆಯೇ ಬ್ರಹ್ಮಾನಂದದಲ್ಲಿ ಎಲ್ಲ ಆನಂದಗಳೂ ಲಭಿಸಿದಂತಾಗುತ್ತದೆ.

ಭಗವತ್ಸಾಕ್ಷಾತ್ಕಾರವನ್ನು ಪಡೆದಾದ ಮೇಲೆ ಜಗತ್ತು ತನ್ನ ಸ್ವರೂಪವನ್ನು ಕಳೆದುಕೊಳ್ಳುತ್ತದೆ. ಸಾಕ್ಷಾತ್ಕಾರಕ್ಕೆ ಮುಂಚೆ ಜಗತ್ತು ಒಂದು ಬಂಧನವಾಗಿ, ಮಾಯಾಜಾಲವಾಗಿ, ನರಕಸದೃಶವಾಗಿ ಕಾಣುತ್ತದೆ. ಆದರೆ ಸಾಕ್ಷಾತ್ಕಾರದ ನಂತರ ಇಡೀ ಜಗತ್ತು ದಿವ್ಯವಾಗುತ್ತದೆ, ಚೈತನ್ಯದಿಂದ ತುಂಬಿ ತುಳುಕುತ್ತಿರುವಂತೆ ಕಾಣುತ್ತದೆ, ಆನಂದದ ಕುಟೀರವಾಗುತ್ತದೆ.

ಈ ಕೆಳಗಿನ ಶ್ಲೋಕ ಇದಕ್ಕೆ ನಿದರ್ಶನ:

**ಸಂಪೂರ್ಣಂ ಜಗದೇವ ನಂದನವನಂ ಸರ್ವೇಽಪಿ ಕಲ್ಪದ್ರುಮಾಃ ।**
**ಗಾಂಗ್ಯಂ ವಾರಿ ಸಮಸ್ತವಾರಿನಿವಹಃ ಪುಣ್ಯಾ ಸಮಸ್ತಾಃ ಕ್ರಿಯಾಃ ।**
**ವಾಚಃ ಪ್ರಾಕೃತ ಸಂಸ್ಕೃತಾಃ ಶ್ರುತಿಶಿರೋ ವಾರಾಣಸೀ ಮೇದಿನೀ**
**ಸರ್ವಾವಸ್ಥಿತಿರಸ್ಯ ವಸ್ತುವಿಷಯಾ ದೃಷ್ಟೇ ಪರೇ ಬ್ರಹ್ಮಣಿ ॥**

"ಪರಬ್ರಹ್ಮನ ಅನುಭವವಾದ ಮೇಲೆ ಸಂಪೂರ್ಣ ಜಗತ್ತು ನಂದನವನವಾಗುತ್ತದೆ, ಎಲ್ಲ ವೃಕ್ಷಗಳೂ ಕಲ್ಪವೃಕ್ಷಗಳೇ ಆಗುತ್ತವೆ, ಎಲ್ಲ ನೀರೂ ಗಂಗಾನೀರೇ ಆಗುತ್ತದೆ; ಎಲ್ಲ ಕ್ರಿಯೆಗಳೂ ಪುಣ್ಯಕ್ರಿಯೆಗಳೇ ಆಗುತ್ತವೆ; ಸಾಮಾನ್ಯ ಮಾತುಗಳೂ ಮಹಾವಾಕ್ಯಗಳಾಗುತ್ತವೆ; ಭೂಮಿಯೇ ವಾರಾಣಸಿಯಾಗುತ್ತದೆ; ಎಲ್ಲ ಅವಸ್ಥೆಗಳೂ ಪರಬ್ರಹ್ಮ ವಿಷಯವಾಗುತ್ತವೆ."

ಒಬ್ಬ ವ್ಯಕ್ತಿಯು ವೇದಾದಿಶಾಸ್ತ್ರಗಳ ವ್ಯಾಪ್ತಿಯನ್ನು ಮೀರಿ ಬೆಳೆಯಬೇಕು ಎಂಬುದು ಶ್ರೀಕೃಷ್ಣನ ಅಭಿಪ್ರಾಯವಿರಬಹುದು. ಶಾಸ್ತ್ರಗಳು ಒಂದು ಸಂಪ್ರದಾಯಕ್ಕೆ ನಮ್ಮನ್ನು ಬದ್ಧಗೊಳಿಸುತ್ತವೆ. ವೇದಗಳು ವೈದಿಕ ಸಂಪ್ರದಾಯಕ್ಕೆ, ವೈಷ್ಣವಶಾಸ್ತ್ರಗಳು ವೈಷ್ಣವ ಸಂಪ್ರದಾಯಕ್ಕೆ, ಜೈನಶಾಸ್ತ್ರಗಳು ಜೈನಸಂಪ್ರದಾಯಕ್ಕೆ, ಬೈಬಲ್ ಕ್ರೈಸ್ತ ಸಂಪ್ರದಾಯಕ್ಕೆ – ಹೀಗೆ ಶಾಸ್ತ್ರಗಳು ನಮ್ಮನ್ನು ಸಾಂಪ್ರದಾಯಿಕ ಚೌಕಟ್ಟಿನ ಮಿತಿಗೆ ಒಳಪಡಿಸುತ್ತವೆ. ಈ ಶಾಸ್ತ್ರವಾಸನೆಯನ್ನು ನಾವು ಮೀರಿ ಬೆಳೆಯಬೇಕೆಂಬುದು ಶ್ರೀಕೃಷ್ಣನ ಅಭಿಪ್ರಾಯ. ನಮಗೆ ನೈತಿಕ, ಆಧ್ಯಾತ್ಮಿಕ ಶಿಸ್ತನ್ನು ನೀಡಲು ವಿವಿಧ ಸಂಪ್ರದಾಯಗಳು ಅವಶ್ಯಕ. ಸಂಪ್ರದಾಯಗಳು ನಮ್ಮ ನಡೆನುಡಿಗಳಿಗೆ ಇತಿಮಿತಿಗಳನ್ನು ವಿಧಿಸಿ ನಾವು ಕೆಟ್ಟಹಾದಿ ಹಿಡಿಯುವುದನ್ನು ತಡೆಯುತ್ತವೆ. ಆದರೆ ಅದೇ ಸಂಪ್ರದಾಯದ ಚೌಕಟ್ಟಿನಲ್ಲಿಯೇ ಉಳಿದು ಬಿಟ್ಟರೆ, ನಾವು ಹೃದಯ ಮತ್ತು ಬುದ್ಧಿವೈಶಾಲ್ಯತೆಯನ್ನು ಕಳೆದುಕೊಳ್ಳುತ್ತೇವೆ, ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಲಾರೆವು. ಕಂಬಳಿಹುಳುವು ಒಂದು ಗೂಡನ್ನು ಕಟ್ಟಿಕೊಂಡು, ಅದರೊಳಗೆ ತನ್ನ ಚಲವನವಲನಗಳನ್ನು ಸೀಮಿತಗೊಳಿಸಿಕೊಂಡು ಬೆಳೆಯುತ್ತದೆ.